ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 18–09–2017

## ಪ್ರಕಟಣೆ ಕೃಪೆಗಾಗಿ

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಛ ಕ್ಯಾಂಪಸ್ ಅಭಿಯಾನ

ಕೊಳ್ಳೇಗಾಲ 18–09–2017 : ದಿನನಿತ್ಯ ತರಗತಿಯಲ್ಲಿ ಪಾಠ ಪ್ರವಚನಗಳನ್ನು ಆಲಿಸುತ್ತಿದ್ದ ವಿದ್ಯಾರ್ಥಿನಿಯರು ಇಂದು ತಮ್ಮ ನೆಚ್ಚಿನ ಅಧ್ಯಾಪಕ ವರ್ಗದವರೊಡಗೂಡಿ ಕ್ಯಾಂಪಸ್ ಸ್ವಚ್ಛಗೊಳಿಸಿದರು.

ಕಾಲೇಜಿನ ವತಿಯಿಂದ ಆಯೋಜಿಸಿದ್ದ "ಸ್ವಚ್ಛ ಕ್ಯಾಂಪಸ್" ಅಭಿಯಾನದಲ್ಲಿ ರಾ.ಸೇ.ಯೋ ಸ್ವಯಂ ಸೇವಕಿಯರೊಡನೆ ವಿದ್ಯಾರ್ಥಿನಿಯರು ಕಾಲೇಜು ಕ್ಯಾಂಪಸ್‌ನ್ನು ಸ್ವಚ್ಛಗೊಳಿಸಿದರು.

ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ನಾವು ಕಲಿಸುವ ಹಾಗೂ ಕಲಿಯಲು ಬರುವ ಪರಿಸರ ಸ್ವಚ್ಛವಾಗಿರಬೇಕಾಗುತ್ತದೆಯಲ್ಲದೆ ಇದರಿಂದ ಮನಸ್ಸು ಉಲ್ಲಾಸದಿಂದಿರುವುದಲ್ಲದೆ ಪಾಠ, ಪ್ರವಚನಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದಾಗಿದೆ. ಪರಿಸರ, ಆರೋಗ್ಯ ಉತ್ತಮವಾಗಿರಬೇಕಾದರೆ ಸ್ವಚ್ಛತೆ ಬಹು ಮುಖ್ಯವಾಗುತ್ತದೆ. ಕಸವನ್ನು ಕಂಡ ಕಂಡ ಕಡೆ ಬಿಸಾಡುವ ಹಕ್ಕೂ ಯಾರಿಗೂ ಇಲ್ಲ. ಜೊತೆಗೆ ಕಸವಿರುವುದನ್ನು ನೋಡಿ ಅದನ್ನು ಸ್ವಚ್ಛಗೊಳಸದೆ ಹಾಗೇ ಬಿಡುವುದು ವಿದ್ಯಾವಂತರಾದ, ವಿವೇಕ ಸಂಪನ್ನರಾದ, ದೇಶದ ಯುವ ಶಕ್ತಿಯಾದ ವಿದ್ಯಾರ್ಥಿಗಳಿಗೆ ಭೂಷಣವಲ್ಲ. ಆದ್ದರಿಂದ ತಾವು ತಮ್ಮ ಕಾಲೇಜಿನ ಸುತ್ತ ಮುತ್ತಲಿನ ಪ್ರದೇಶವನ್ನು ನಂತರ ಪಟ್ಟಣದ ಪ್ರಮುಖ ಪ್ರದೇಶಗಳನ್ನು ಸ್ವಚ್ಛಗೊಳಿಸುವುದರಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡರೆ ಸಾರ್ವಜನಿಕರಿಗೆ ಮಾದರಿಯಾಗಬಹುದಾಗಿದೆ ಎಂದು ಕರೆ ನೀಡಿದರು.

ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಶ್ರೀಮತಿ ಎಸ್ ಮಮತ ರವರು ಮಾತನಾಡಿ ಪ್ರತೀ ವಾರದಲ್ಲಿ ಒಮ್ಮೆ ಈ ಸ್ವಚ್ಛತಾ ಕಾರ್ಯಕ್ರಮದಲ್ಲಿ ಸ್ವಯಂ ಸೇವಕಿಯರ ಜೊತೆಗೆ ಕಾಲೇಜಿನ ಇತರೆ ವಿದ್ಯಾರ್ಥಿನಿಯರು ಹಾಗೂ ಅಧ್ಯಾಪಕ ವೃಂದವು ಕೈ ಜೋಡಿಸುತ್ತಿರುವುದು ಸಂತಸದ ವಿಷಯ ಮುಂದಿನ ದಿನಗಳಲ್ಲಿ ನಮ್ಮದೇ ಕ್ಯಾಂಪಸ್‌ನಲ್ಲಿರುವ ಇತರೆ ವಿಭಾಗಗಳ ವಿದ್ಯಾರ್ಥಿನಿಯರು ಈ ಸ್ವಚ್ಛತಾ ಅಭಿಯಾನದಲ್ಲಿ ಪ್ರಾಚಾರ್ಯರ ಸಲಹೆಯಂತೆ ತೊಡಗಿಸಿಕೊಂಡು ಪಟ್ಟಣದ ಪ್ರಮುಖ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.


ಜೆ ಎಸ್ ಎಸ್
ಮಹಿಳೆಯರ ವಸತಿ ನಿಲಯ
JSS
WOMENS HOSTEL



